The anxiety of the Hon'ble Member is, ther is an increased traffic in Koppal Town because of the Hubli-Raichur Road. Hon'ble Minister of State for Home may, get the proposal from the Department and see that it is done.

ಶ್ರೀ ಕರಡಿ ಸಂಗಣ್ಣ:- ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕೂಡ ಶುರುವಾಗಿದೆ. ಇಲಾಖೆಯಿಂದ ಇನ್ನೂ ಬಂದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು:- ನನ್ನ ಭಾಷೆ ಇಷ್ಟು ಸರಳವಾಗಿರುತ್ತದೆ. ಪ್ರಪೋಸಲ್ಸ್ ಕಳುಹಿಸಬೇಕಾಗಿರುವುದು ನೀವಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಸೂಚನೆ ಕೊಡುತ್ತಿದ್ದೇನೆ. ನೀವು ಹೇಳುವುದನ್ನು ನಾನು ಹೇಳಿದ್ದೇನೆ.

ಶ್ರೀ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, The population of koppal Town is around 45000.

ನಮ್ಮ ಎಸ್‌ಪಿ ಕಡೆಯಿಂದಲೂ ಕೂಡ ಬಂದಿದೆ ಕೊಪ್ಪಳ ಟೌನ್‌ಗೆ ಟ್ರಾಫಿಕ್ ಪೋಲೀಸ್ ಸ್ಟೇಷನ್ ಬೇಕಾಗುತ್ತದೆ ಎಂದು. Though there is no proposal before the Government for opening of a traffic police station at koppal Town ಒಂದು ಲಕ್ಷ ಪಾಪ್ಯುಲೇಷನ್ ಎಲ್ಲೆಲ್ಲಿ ಇದೆ, ಅಲ್ಲಿ ಮಾತ್ರ ಟ್ರಾಫಿಕ್ ಪೋಲೀಸ್ ಸ್ಟೇಷನ್ ಮಾಡಬೇಕೆಂದು ಇದೆ. ಇದರ ಜೊತೆಗೆ ಕೊಪ್ಪಳ ಡಿವಿಜನ್‌ನಲ್ಲಿ ಜನಸಂದಣಿ ಹೆಚ್ಚಿದ್ದು ಆಕ್ಸಿಡೆಂಟ್ಸ್ ಕೂಡ ಜಾಸ್ತಿಯಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ನೋಡಿ ಅಲ್ಲಿ ಕೂಡ ಒಂದು ಸ್ಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಬೆಂಗಳೂರಿನ ಸೌಂದರ್ಯ ರಕ್ಷಣೆಗೆ ಕೈಗೊಂಡ ಕ್ರಮಗಳು.

68(337) ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):

ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬೆಂಗಳೂರಿನ ಸೌಂದರ್ಯ ರಕ್ಷಣೆಗೆ ಹಾಗೂ ನೈರ್ಮಲ್ಯ ಕಾಪಾಡಲು ಸರ್ಕಾರವು ಪ್ರತಿ ವರ್ಷ ಎಷ್ಟು ಹಣ ಬಿಡುಗಡೆ ಮಾಡುತ್ತಿದೆ. ಎಷ್ಟು ಹಣ ವೆಚ್ಚವಾಗುತ್ತದೆ:

(ಆ) 1995-96ನೇ ಸಾಲಿನಲ್ಲಿ ಬಾಕಿ ಉಳಿದಿರುವ ಹಣ ಎಷ್ಟು? ಬಾಕಿ ಉಳಿದಿರುವ ಹಣವನ್ನು ಯಾವ ರೀತಿ, ಯಾವ ಯೋಜನೆಗಳಿಗೆ ವೆಚ್ಚ ಮಾಡಲಾಗುವುದು?

ಶ್ರೀ. ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು.)

(ಅ) ಈ ಬಾಬಿಗಾಗಿ ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ, ಆದರೆ ವಿಶ್ವ ಸುಂದರಿ ಸ್ಪರ್ಧೆ, ವಿಮಾನ ಪ್ರದರ್ಶನ (ಏರೋ ಷೋ) ಹಾಗೂ ರಾಷ್ಟ್ರೀಯ ಕೀಡೆಗಳ ಸಂದರ್ಭದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಸೌಂದರ್ಯ ರಕ್ಷಣೆಗೆ ರೂ.5.0 ಕೋಟಿಯನ್ನು ಮುಂದೆ ನೀಡಬಹುದಾದ ಹಣಕಾಸು ಆಯೋಗದ ಅವಾರ್ಡ್‌ನ ಮೊತ್ತದಲ್ಲಿ ಮುಂಗಡವಾಗಿ ನೀಡಲಾಗಿದೆ, ಹಾಗೂ ಶ್ರೀ ಎನ್,ಲಕ್ಷ್ಮಣರಾವ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಸುಂದರೀಕರಣ ಯೋಜನೆಗಾಗಿ, ಯೋಜನೆ ತಯಾರಿಸಲು ಸರ್ಕಾರವು 5.8 ಲಕ್ಷ. ರೂ.ಗಳನ್ನು ಬಿಡುಗಡೆ ಮಾಡಿದೆ.

(ಆ) ರೂ. 5.0 ಕೋಟಿ ಬಿಡುಗಡೆಯಾದ ಹಣದಲ್ಲಿ 50.ಲಕ್ಷ ರೂ.ಗಳನ್ನು ಬೆಂಗಳೂರು ಜಲಮಂಡಳಿಗೆ ನೀರಿನ ಸೌಕರ್ಯ ಒದಗಿಸಲು, ಹಾಗೂ 50. ಲಕ್ಷ ರೂ.ಗಳನ್ನು ವಿದ್ಯುತ್ ದೀಪಗಳನ್ನು ಒದಗಿಸಲು ಹಗೂ 64.75 ಲಕ್ಷ ರೂ.ಗಳನ್ನು ಕಾಮಗಾರಿಗಳನ್ನು ತೆಗೆದುಕೊಳ್ಳಲು ವಿನಿಯೋಗಿಸಲಾಗಿದೆ. ಬಾಕಿ 335.75 ಲಕ್ಷ ರೂ.ಉಳಿದಿದೆ. ಹಾಗೂ ಇದನ್ನು ರಸ್ತೆಗಳ ದುರಸ್ತಿಗಾಗಿ ಉಪಯೋಗಿಸಲು ಕಾರ್ಯಕ್ರಮ ತಯಾರಿಸಲಾಗುತ್ತಿದೆ. ಶ್ರೀ ಎನ್.ಲಕ್ಷ್ಮಣರಾವ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಸುಂದರೀಕರಣ ಯೋಜನೆಗಾಗಿ ಬಿಡುಗಡೆಯಾದ 5.0.ಲಕ್ಷ ರೂ.ಗಳಲ್ಲಿ 2.16 ಲಕ್ಷ ರೂ. ವೆಚ್ಚವಾಗಿ 2.84 ಲಕ್ಷ ರೂ. ಉಳಿದಿರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸೌಂದರ್ಯ ರಕ್ಷಣೆಗೆ ಹಾಗೂ ನೈರ್ಮಲ್ಯ ಕಾಪಾಡಲು ಸರ್ಕಾರವು ಪ್ರತಿ ವರ್ಷ ಎಷ್ಟು ಹಣ ಬಿಡುಗಡೆ ಮಾಡುತ್ತಿದೆ, ಎಷ್ಟು ಹಣ ವೆಚ್ಚವಾಗುವುದು ಎಂದು ನನ್ನ ಪ್ರಶ್ನೆಗೆ ಉತ್ತರವಾಗಿ "ಈ ಬಾಬಿಗಾಗಿ ಪ್ರತ್ಯೇಕವಾಗಿ ಯಾವುದೇ ಅನುದಾನ ಬಿಡುಗಡೆ ಯಾಗಿಲ್ಲ, ಆದರೆ ವಿಶ್ವ ಸುಂದರಿ ಸ್ಪರ್ಧೆ, ವಿಮಾನಪ್ರದರ್ಶನ (ಏರೋ ಷೋ) ಹಾಗೂ ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಸೌಂದರ್ಯ ರಕ್ಷಣೆಗೆ ರೂ. 5.0 ಕೋಟಿಯನ್ನು ಮುಂದೆ ನೀಡಬಹುದಾದ ಹಣಕಾಸು ಆಯೋಗದ ಅವಾರ್ಡ್‌ನ ಮೊತ್ತದಲ್ಲಿ ಮುಂಗಡವಾಗಿ ನೀಡಲಾಗಿದೆ ಎಂದಿದ್ದಾರೆ. ನಾನು ಕೇಳುವುದೇನೆಂದರೆ ಬೆಂಗಳೂರಿನಲ್ಲಿ ಸಿಟಿಜನ್‌ಗಿಂತ ವಿಸಿಟರ್ಸ್ ಇಂಪಾರ್ಟೆಂಟಾ? ಮಾನ್ಯ ಸಚಿವರಲ್ಲಿ ನನ್ನ ಪ್ರಶ್ನೆ ಇರುವುದು ಬೆಂಗಳೂರಿನ ಸೌಂದರ್ಯವನ್ನು ಉಳಿಸಿಕೊಳ್ಳುವುದಕ್ಕೆ, ಹೆಚ್ಚಿಸಿಕೊಳ್ಳುವುದಕ್ಕಲ್ಲ. ಹಾಗೂ ನೈರ್ಮಲ್ಯೀಕರಣ ಕಾಪಾಡುವುದಕ್ಕೆ, ಏನು ಕ್ರಮ ಯೋಚಿಸಿದ್ದೀರಿ? ಇಡೀ ಬೆಂಗಳೂರಿನಲ್ಲಿ ಯಾವ ಪರಿಸ್ಥಿತಿ ಇದೆ ಎಂದರೆ ನಗರದಲ್ಲಿ ಕಸವನ್ನು ಎತ್ತುತ್ತಿಲ್ಲ. ಕಸ ಸಾಗಾಣಿಕೆ ಆಗುತ್ತಿಲ್ಲ. ಗಾರ್ಬೇಜ್ ಡಿಸ್‌ಪೋಸಲ್ ಆಗುತ್ತಿಲ್ಲ. ಗಾರ್ಬೇಜ್ ಎಲ್ಲೆಂದರಲ್ಲಿ ನೀರು ಹರಿಯುತ್ತಿದೆ. ಎಲ್ಲಾ ಕಡೆಯಲ್ಲೂ ಹೋರ್ಡಿಂಗ್ಸ್ ಬಂದಿದೆ. ನಗರದ ಸೌಂದರ್ಯವನ್ನು ಉಳಿಸುವುದಕ್ಕೆ ನೈರ್ಮಲ್ಯೀಕರಣ ಹೆಚ್ಚು ಮಾಡುವುದಕ್ಕೆ 'ಏನು ಕ್ರಮ ತೆಗೆದು ಕೊಂಡಿದ್ದೀರಿ? ಸರ್ಕಾರದಿಂದ ದುಡ್ಡು ಕೊಡುತ್ತಿರುವುದು ಇದಕ್ಕೆ ಸಾಕೇ? ಎಂದು ಹೇಳಬೇಕು.

ಶ್ರೀ ಅನಂತಸಾಗ್ :- ಮಾನ್ಯ ಅಧ್ಯಕ್ಷರೇ, ನಗರ ಸೌಂದರ್ಯವನ್ನು ಕಾಪಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಸನ್ಮಾನ್ಯ ಸದಸ್ಯರು ಗಾರ್ಬೇಜ್ ವಿಷಯ

ರಸ್ತೆಗಳ ರಪೇರಿ ಮುಂತಾದ ವಿಷಯ ಹೇಳಿದ್ದಾರೆ. ಐದು ಕೋಟಿ ರೂಪಾಯಿಗಳಲ್ಲಿ ಕೆಲವು ರಸ್ತೆಗಳನ್ನು ಮಾಡುವುದಕ್ಕೆ ಕೊಟ್ಟಿರುವುದು. ಮತ್ತೆ ಕಳೆದ ಎರಡು ತಿಂಗಳ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಅಧಿಕಾರಿಗಳ ಜೊತೆಯಲ್ಲಿ ಎಲ್ಲಾ ಕಡೆ ಹೋಗಿ ತಕ್ಷಣ ಕೆಲಸಕಾರ್ಯಗಳನ್ನು ಪ್ರಾರಂಭಿಸಬೇಕು ಎಂದು ಆದೇಶವನ್ನು ಕೊಡಲಾಗಿದೆ. ಅದರ ನಂತರ ಕಾರ್ಪೊರೇಷನ್ ಚುನಾವಣೆಗಳು ಬಂದ ನಂತರ ಕಾರ್ಪೊರೇಟರ್ಸ್‌ಗಳು ಬಂದಿದ್ದಾರೆ. ಅವರು ಸ್ಥಾಯೀ ಸಮಿತಿಗಳನ್ನು ಮಾಡಿಕೊಂಡಿದ್ದಾರೆ. ಎಲ್ಲಿ ಕೆಲಸವಾಗಬೇಕು, ಕಾರ್ಪೊರೇಟರ್ಸ್‌ಗಳ ಅಪ್ರೂವಲ್ ತೆಗೆದುಕೊಂಡು ಮಾಡಬೇಕಾಗುತ್ತದೆ. ಸ್ವಲ್ಪ ತಡವಾಗಿದೆ. 15 ದಿವಸದ ಒಳಗೆ ಈ ಕೆಲಸಕಾರ್ಯಗಳನ್ನೆಲ್ಲಾ ಪ್ರಾರಂಭ ಮಾಡಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೇ, 21-11-96 ರಂದು ನಗರಾಭಿವೃದ್ಧಿ ಸಚಿವರು ಹೇಳಿದರು, ಬೆಂಗಳೂರು ನಗರವನ್ನು ಸುಧಾರಿಸುವುದಕ್ಕಾಗಿ 250 ಕೋಟಿ ರೂಪಾಯಿಗಳು ಬೇಕು ಎಂದು ಮುಖ್ಯಮಂತ್ರಿಗಳಲ್ಲಿ ಕೇಳಿದ್ದೇನೆ. ಆದರೆ 250 ಕೋಟಿ ರೂಪಾಯಿ ಸಾಲುವುದಿಲ್ಲ. 500 ಕೋಟಿ ರೂಪಾಯಿ ಬೇಕು ಎಂದು ಕೇಳಿದ್ದೇನೆ ಎಂದು ಹೇಳಿದ್ದೀರಿ. ವಿಶ್ವ ಸುಂದರಿ ಸ್ಪರ್ಧೆಗೆ, ವೈಮಾನಿಕ ಸ್ಪರ್ಧೆಗೆ ಐದುಕೋಟಿ ರೂಪಾಯಿ ಕೊಟ್ಟು ಅದರಲ್ಲಿ ಒಂದು ಮುಕ್ಕಾಲು ಕೋಟಿ ರೂಪಾಯಿ ಖರ್ಚು ಮಾಡಿಸಿ ಬೆಂಗಳೂರು ನಗರದ ಸೌಂದರ್ಯವನ್ನು ಏನು ಉಳಿಸುವುದಕ್ಕೆ ಸಾಧ್ಯ ಇದೆ? ನೈರ್ಮಲ್ಯೀಕರಣ ಹೆಚ್ಚಿಸುವುದಕ್ಕೆ ಹೇಗೆ ಸಾಧ್ಯ ಇದೆ? ವರ್ಷದ ಇಡೀ ನಡೆಯುವ ಕಾರ್ಯಕ್ರಮವನ್ನು ಹೇಗೆ ಮಾಡುತ್ತೀರಿ?

ಶ್ರೀ ಅನಂತನಾಗ್:– ಮಾನ್ಯ ಅಧ್ಯಕ್ಷರೇ, ಕಾರ್ಪೊರೇಷನ್ ಚುನಾವಣೆಯಲ್ಲಿ ಕಾರ್ಪೊರೇಟರ್ಸ್ ಅಧಿಕಾರಕ್ಕೆ ಬಂದ ನಂತರ ಮುಂದಿನ ವರ್ಷ 415 ಕೋಟಿ ರೂಪಾಯಿ ಬಜೆಟನ್ನು ಮಂಡಿಸಿದ್ದಾರೆ. ಹೊಸ ನೋಟೀಫೈಡ್ ಏರಿಯಾದಲ್ಲಿ 13 ಏರಿಯಾಗಳು ಕಾರ್ಪೊರೇಷನ್‌ಗೆ ಸೇರಿವೆ. ಅದಕ್ಕೆ ಮಾತ್ರ 190 ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಕಾರ್ಪೊರೇಷನ್‌ನಿಂದ ಸರ್ಕಾರದ ಮುಂದೆ ಬೇಡಿಕೆ ಬಂದಿದೆ. ತಾವು ಕೇಳುವ ಸೌಂದರ್ಯೀಕರಣಕ್ಕೆ ಸರ್ಕಾರದಿಂದ ಮಾತ್ರವಲ್ಲ, ಅನೇಕ ಎನ್.ಜಿ.ಓ; ಇಂಡಸ್ಟ್ರಿಯಲಿಸ್ಟ್ಸ್ ಅವರ ಮೀಟಿಂಗ್ ಕರೆದು ಏನು ಅವರ ಕಡೆಯಿಂದ ಬರುತ್ತದೆ, ಅವರೂ ಕೂಡ ಸಹಕರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು ಅನೇಕ ಸಮಸ್ಯೆಗಳ ಬಗ್ಗೆ ಕುರಿತು ಹೇಳಿದ್ದಾರೆ, ನಾವು ಕಾರ್ಪೊರೇಷನ್‌ಗೆ ಆದೇಶವನ್ನು ಕೊಟ್ಟಿದ್ದೇವೆ. ಇನ್ನು ಮುಂದೆ ಮಾಡುತ್ತಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೇ, ದಯವಿಟ್ಟು ಬೆಂಗಳೂರು ನಗರವನ್ನು ನರಕ ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ, ಸುಮ್ಮನೆ ನಗರಪಾಲಿಕೆ ಮೇಲೆ ಹಾಕಿದರೆ ಹೇಗೆ? ಅದೇನೋ ಗಾದೆ ಹೇಳುತ್ತಾರಲ್ಲಾ, "ಹನುಮಂತನೇ ಹಗ್ಗ ತಿನ್ನುವಾಗ ಪೂಜಾರಿ ಶಾವಿಗೆ ಕೇಳಿದನಂತೆ" ಆ ಪರಿಸ್ಥಿತಿ ಬರುತ್ತದೆ. ಅವರ ಹತ್ತಿರ ಕೇಳಿದರೆ ನಮ್ಮಲ್ಲಿ ಹಣ ಇಲ್ಲ ಎನ್ನುತ್ತಾರೆ. ಈಗ ಹೊಸದಾಗಿ ಚುನಾಯಿತರಾದ ಕಾರ್ಪೊರೇಟರ್ಸ್ ಪಾಡಂತೂ ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಸರ್ಕಾರದಿಂದ ಒಂದು ಲಂಪ್‌ಸಮ್

ಅಮೌಂಟನ್ನು ಬಿಡುಗಡೆ ಮಾಡಿ ಇಂತಿಷ್ಟೇ ಕೆಲಸಕ್ಕೆ ಎಂದು ಬಿಡುಗಡೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಅನಂತನಾಗ್: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಸಲಹೆಗಳನ್ನು ಪರಿಶೀಲಿ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಎನ್. ರಾಜಣ್ಣ: ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸೌಂದರ್ಯವನ್ನು ಹಾಳುಮಾಡುವ ಈ ಹೋರ್ಡಿಂಗ್ಸ್ ಎರಡು ವರ್ಷದಿಂದೀಚೆಗೆ ಎಷ್ಟು ಅನ್‌ಅಥರೈಸ್ಡ್ ಆಗಿ ಬಂದಿದೆ?

Whether they have taken permission from concerned Authorities? what is the total revenue loss because of this?

ಶ್ರೀ ಅನಂತನಾಗ್: ಮಾನ್ಯ ಅಧ್ಯಕ್ಷರೇ, ಈರ್ವರೂ ಸದಸ್ಯರೂ ಕೂಡ ಕಾರ್ಪೊರೇಟರ್ ಆಗಿದ್ದವರು. ಅವರಿಗೆ ಸಮಸ್ಯೆ ಬಗ್ಗೆ ಗೊತ್ತಿದೆ.

ಉತ್ತರ ತಕ್ಷಣ ಇಲ್ಲ. ಉತ್ತರ ತರಿಸಿಕೊಡಲಾಗುವುದು.

ಶ್ರೀ ಜೆ.ಹೆಚ್.ಪಟೇಲ್: ಅದಕ್ಕೆ ಉತ್ತರ ಏನು ಕೊಡಬಹುದು ಎಂದರೆ ಸಾವಿರಾರು ಇವೆ ನಿಜ. ಕೆಲವು ಆತರೈಸ್ಡ್ ಇದ್ದರೆ ಇನ್ನು ಕೆಲವು ಅನ್ ಆತರೈಸ್ಡ್ ಇರುವುದರಿಂದ ಇದರ ಬಗ್ಗೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾವು ಒಪ್ಪುತ್ತೇವೆ. ನಗರದ ಸೌಂದರ್ಯವನ್ನು ಕಾಪಾಡಿಕೊಂಡು ಬರುವುದು ಮತ್ತು ಇರುವ ಸೌಂದರ್ಯವನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡುತ್ತದೆ. ಆದರೆ ಜನ ನಗರದ ಸೌಂದರ್ಯವನ್ನು ಹಾಳು ಮಾಡಬೇಕು ಎಂದು ಹೊರಟರೆ ಸರ್ಕಾರ ಏನು ಮಾಡಲು ಸಾಧ್ಯ? ಸಿಂಗಾಪುರದಲ್ಲಿ ನೀವು ನೋಡಿದ್ದೀರಿ, ಅಲ್ಲಿ ನಗರದ ಸೌಂದರ್ಯವನ್ನು ಅತ್ಯಂತ ಚೊಕ್ಕಟವಾಗಿ ಶುಭ್ರವಾಗಿ ಉಳಿಸಿಕೊಳ್ಳಲು ಎಲ್ಲರೂ ಶ್ರಮಿಸುತ್ತಾರೆ. ಇಲ್ಲಿ ಹಾಗೆ ಇಲ್ಲ. ಈ ಕಡೆ ಅವರ ಮನೆ ಮುಂದೆ ಕಸ ಹಾಕುವುದು, ಆಕಡೆ ಇವರ ಮನೆ ಮುಂದೆ ಕಸ ಹಾಕುವುದು ಕಾರ್ಪೊರೇಷನ್‌ಗೆ ಮೊನ್ನೆ ತಾನೇ ಚುನಾವಣೆಯಾಗಿ ಅಸ್ತಿತ್ವಕ್ಕೆ ಬಂದಿದೆ. ಈಗ ನಾನು ಕಾರ್ಪೊರೇಷನ್‌ಗೆ ಸೂಚನೆ ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಹಿಂದೆ ಕಾರ್ಪೊರೇಷನ್ ಇರಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅದು ಕಂಟಿನ್ಯೂಯಸ್ ಬಾಡಿ. ಅಲ್ಲಿ ಕಮಿಷನರೆ ಇದ್ದಾರೆ ಹೆಲ್ತ್ ಆಫೀಸರ್ ಇದ್ದಾರೆ, ಇಂಜಿನಿಯರ್ ಇದ್ದಾರೆ, ಆದರೆ ನಾಗರೀಕರ ಮೇಲೆ ಜವಾಬ್ದಾರಿ ಹಾಕುವಾಗ ನೀವು ಹೇಗೆ ವರ್ತಿಸುತ್ತೀರಿ ಎಂಬುದು ಮುಖ್ಯ. ನಮ್ಮ ಸಂಸ್ಥೆಗಳು ತಮಗಿರುವ ಜವಾಬ್ದಾರಿ ಇರಿತು ಕೆಲಸ ಮಾಡುವುದಿಲ್ಲ. ನಾಗರೀಕರ ಮೇಲೆ ಜವಾಬ್ದಾರಿ ಹಾಕಿ ಎಲ್ಲರೂ ಆಫೀಸರ್ ಆಗುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ: ಇವತ್ತಿನದಿವಸ ಬೆಂಗಳೂರು ನಗರದಲ್ಲಿ ಜಾಸ್ತಿ ಅಧಿಕಾರಿಗಳು ಆಗುತ್ತಿದ್ದಾರೆ. ಒಬ್ಬರು ಅಧಿಕಾರಿಗಳು ಇರುವ ಕಡೆ ಹತ್ತು ಜನ ಅಧಿಕಾರಿಗಳು ಇರುತ್ತಾರೆ. ಕ್ಲೀನ್ ಮಾಡಬೇಕಾದ ಕಡೆ ಅಧಿಕಾರಿಗಳು ಇರುತ್ತಾರೆಯೇ ಹೊರತು ಕ್ಲೀನ್ ಮಾಡುವವರು ಇರುವುದಿಲ್ಲ.

ಅಧ್ಯಕ್ಷರು: ಬೆಂಗಳೂರಿನಲ್ಲಿರುವ ಸ್ಯಾವೆಂಜರುಗಳೆಲ್ಲಾ ಆಫೀಸರುಗಳಾದರೆ ಹೇಗೆ?

ಶ್ರೀ ಅನಂತಸಾಗ್: ಸನ್ಮಾನ್ಯ ಅಧ್ಯಕ್ಷರೇ ಹಿಂದೆ ಬೆಂಗಳೂರಿನ ಜನಸಂಖ್ಯೆ ಬಹಳ ಕಡಿಮೆ ಇತ್ತು. ಇವತ್ತು ಜಾಸ್ತಿಯಾಗಿದೆ. ಈಗಿರುವ ಆಫೀಸರುಗಳಿಗೆ ಎಲ್ಲಾ ಕೆಲಸವನ್ನು ನೋಡುವುದಕ್ಕಾಗುವುದಿಲ್ಲವೆಂದು ಇರುವ ಅಧಿಕಾರಿಗಳ ಜೊತೆಗೆ ಇನ್ನೂ ಕೆಲವು ಆಫೀಸರುಗಳನ್ನು ಜಾಸ್ತಿ ಮಾಡಿದ್ದೇವೆ. ಆದುದರಿಂದ ಅವರ ಸಹಾಯ ಪಡೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ: ಉತ್ತರದಲ್ಲಿ 7 ಜನ ಪಾರ್ಟ್‌ನರ್‌ಗಳೆಂದು ಕೊಟ್ಟಿದ್ದಾರೆ. ತುಮಕೂರು ನ್ಯಾಯಾಲಯದಲ್ಲಿ ಸಿವಿಲ್ ಡಿಸ್‌ಪ್ಯೂಟ್ ಇದೆ ಎಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಟ್ಟಿರುವುದಿಲ್ಲ. ಈ ಸಂಸ್ಥೆಯಲ್ಲಿರುವ ಕೆಲವು ಪಾಲುದಾರರು ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ಕೊಟ್ಟಿದ್ದಾರೆಯೇ? ಹಾಗಿಲ್ಲದಿದ್ದಲ್ಲಿ ಅವರ ವಿವರ ನೀಡುವುದು ಎಂದು ನಾನು ಕೇಳಿದ್ದೇನೆ. ಅದಕ್ಕೆ ಅವರು ಹಣ ಮಸೂಲ್ಮಾಡಿದ್ದೇವೆಂದು ಹೇಳಿದ್ದಾರೆ. ಇಂತಿಷ್ಟು ತೆರಿಗೆಯನ್ನು ಯಾರು ಪಡೆದವರು, ನಿಗಮದ ಹೆಸರಿನಲ್ಲಿ ಕಟ್ಟಿದ್ದಾರೆಯೇ ಅಥವಾ ಪಾರ್ಟ್‌ನರ್ ಹೆಸರಿನಲ್ಲಿ ಕಟ್ಟಿದ್ದಾರೆಯೇ? ಈ ಬಗ್ಗೆ ಸರಿಯಾದ ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್: ಇದು ಯಾವುದೋ ಒಂದು ಖಾಸಗಿ ಕಂಪನಿ, ಇದು 1987ರಲ್ಲಿ ಅರ್ಜಿ ಹಾಕಿ 1991ರಲ್ಲಿ ಸರ್ಕಾರಿ ಆಜ್ಞೆಯಾದ ಬಳಿಕ ಅವರು ಅರ್ಜಿ ಹಾಕಿದವರು ಸ್ಥಳ ಮತ್ತು ಹೆಸರು ಇವುಗಳನ್ನು ಬೇರೆ ಮಾಡಿದರು. ನಮ್ಮಲ್ಲಿ ಅರ್ಜಿ ಹಾಕಿದ್ದು ಶಿಡ್ಲಘಟ್ಟದ ಹತ್ತಿರ ವೇಣುಗೋಪಾಲ್ ರೆಡ್ಡಿ ಎಂಬುವವರು ಅವರು ಸ್ಥಳವನ್ನು ತುಮಕೂರು ಹತ್ತಿರಕ್ಕೆ ಬದಲಾಯಿಸಿದ್ದಾರೆ. ಅವರವರ ಪಾರ್ಟ್‌ನರ್‌ಷಿಪ್‌ನಲ್ಲಿ ತೊಂದರೆ ಬಂತು. ಒಬ್ಬರಿಗೊಬ್ಬರು ಪ್ರಶ್ನೆ ಹಾಕಿದ್ದಾರೆ. ವಾಸ್ತವವಾಗಿ ಎಷ್ಟು ಅಬಕಾರಿ ಶುಲ್ಕವನ್ನು ಕಟ್ಟಿದ್ದಾರೆಂಬ ಮಾಹಿತಿ ಕೊಟ್ಟಿದ್ದೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ: ಯಾರು ತೆರಿಗೆ ಕಟ್ಟಿದ್ದಾರೆಂಬುದಕ್ಕೆ ಸರ್ಕಾರದಲ್ಲಿ ರಶೀದಿ ಇರುತ್ತದೆ. ಅದಕ್ಕೋಸ್ಕರ ನಾನು ಕೇಳುವುದು ಏನೆಂದರೆ ಫರ್ಮ್‌ನ ಹೆಸರಿನಲ್ಲಿ ಕಟ್ಟಿದ್ದಾರೋ ಅಥವಾ ಇಂಡಿವಿಜುಯಲ್ ಆಗಿ ಕಟ್ಟಿದ್ದಾರೋ?

ಶ್ರೀ ಜೆ.ಹೆಚ್. ಪಟೇಲ್: ಅವರು ತೆರಿಗೆ ಕಟ್ಟಿರುವ ಬಗ್ಗೆ ಮಾಹಿತಿ ಇದೆ. ಯಾರ ಹೆಸರಿನಲ್ಲಿ ಕಟ್ಟಿದ್ದಾರೆ ಎಂದು ಬೇಕಾದರೆ ಹೇಳುತ್ತೇನೆ.

ಕುಂದಾಪುರ ತಾಲ್ಲೂಕು ಹಾಲಾಡಿ ಸಬ್ ಸ್ಟೇಷನ್ ಕಾಮಗಾರಿ

70(423): ಶ್ರೀ.ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ)